2020 ಕ.ತೀ.ವ 849

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್

ಡಿ. ರಮೇಶ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*

ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿನ ಹಾಗೂ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ ಮೇರೆಗಿನ ರಿಟ್ ಅರ್ಜಿ.

ಈ ರಿಟ್ ಅರ್ಜಿಯು 1997ನೇ ಸಾಲಿನಲ್ಲಿ, 14.59 ಎಕರೆಗಳ ವಿಸ್ತೀರ್ಣದ ಪ್ರದೇಶದ ಮೇಲೆ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಕುರಿತಾಗಿದೆ. 4ನೇ ಏಪ್ರಿಲ್, 2008ರಂದು ಪ್ರತಿವಾದಿ–ರಾಜ್ಯ ಸರ್ಕಾರವು ಅರ್ಜಿದಾರರಿಗೆ ಗುತ್ತಿಗೆ ಮಂಜೂರಾತಿಗೆ ಶಿಫಾರಸ್ಸು ಮಾಡಿ, ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಪೂರ್ವಾನುಮೋದನೆ ನೀಡಲು ಭಾರತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿತ್ತು. ಸದರಿ ಪ್ರಕರಣದ ಮೇರೆಗೆ ಭಾರತ ಸರ್ಕಾರವು ಪೂರ್ವಾನುಮೋದನೆಯನ್ನು ನೀಡಿತು. ತರುವಾಯದಲ್ಲಿ ರಾಜ್ಯ ಸರ್ಕಾರವು, ಸದರಿ ಜಮೀನು ಅರಣ್ಯ ಭೂಮಿ ವ್ಯಾಪ್ತಿಯಲ್ಲಿ ಬರುವುದು ಮತ್ತು ಈ ರೀತಿಯ ಇನ್ನೂ ಹಲವು ಅರ್ಜಿಗಳನ್ನು ಇತ್ಯರ್ಥಗೊಳಿಸಬೇಕಿದೆ ಎಂಬ ಕಾರಣದ ಮೇರೆಗೆ, ಭಾರತ ಸರ್ಕಾರಕ್ಕೆ ಪೂರ್ವಾನುಮೋದನೆ ನೀಡದಿರಲು ಮನವಿ ಮಾಡಿದ್ದು, ಭಾರತ ಸರ್ಕಾರವು, ರಾಜ್ಯ ಸರ್ಕಾರದ ಶಿಫಾರಸ್ಸಿನ ಆಧಾರದ ಮೇಲೆ ಪೂರ್ವಾನುಮೋದನೆಯನ್ನು ನೀಡಲಾಗಿದ್ದು, ಒಮ್ಮೆ ಆ ಶಿಫಾರಸ್ಸನ್ನು ಹಿಂಪಡೆದರೆ

*ರಿಟ್ ಅರ್ಜಿ ಸಂಖ್ಯೆ: 14301/2017 (ಜಿಎಮ್–ಎಮ್ಎಮ್–ಎಸ್), ದಿನಾಂಕ 11ನೇ ಸೆಪ್ಟೆಂಬರ್, 2019.

ಪೂರ್ವಾನುಮೋದನೆ ಅಸ್ತಿತ್ವದಲ್ಲಿರುವುದಿಲ್ಲವೆಂದು ತಿಳಿಸಿದೆ. ಭಾರತ ಸರ್ಕಾರದ ಸೂಚನೆ ಮೇರೆಗೆ ಕರ್ನಾಟಕ ಸರ್ಕಾರವು ಗಣಿಗಾರಿಕೆ ಗುತ್ತಿಗೆ ಮಂಜೂರಾತಿ ಆದೇಶವನ್ನು ಹಿಂಪಡೆದ ಕುರಿತು ಅರ್ಜಿದಾರರಿಗೆ ಪತ್ರ ಬರೆದು ತಿಳಿಸಿದೆ. ಇದರಿಂದ ಬಾಧಿತರಾದ ಅರ್ಜಿದಾರರು ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

ಪ್ರಸ್ತುತ ಅರ್ಜಿಯಲ್ಲಿ, ದಿನಾಂಕ: 10ನೇ ನವಂಬರ್, 2016ರ ಆದೇಶವನ್ನು, ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ನ್ನು ಹಾಗೂ ದಿನಾಂಕ: 4ನೇ ಜನವರಿ, 2017ರ ಪತ್ರವನ್ನು ಪ್ರಶ್ನಿಸಲಾಗಿದೆ ಎಂಬುದನ್ನು ಇಲ್ಲಿ ನಾವು ಗಮನಿಸಿದ್ದೇವೆ.

ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿ, ಅವರು ಮಂಡಿಸಿದ ದಾಖಲೆಗಳನ್ನು ಪರಿಶೀಲಿಸಿ ಮತ್ತು ಹಿಂದಿನ ತೀರ್ಪುಗಳನ್ನು ಅವಲೋಕಿಸಿ, ಈ ನ್ಯಾಯಾಲಯವು ಈ ಮುಂದಿನಂತೆ ಆದೇಶ ಹೊರಡಿಸಿ ಅರ್ಜಿಯನ್ನು ವಿಲೆ ಮಾಡಿದೆ:

(i) 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಪರಂತುಕದ ಅಡಿಯಲ್ಲಿ ಹಿಂದಿನ ಅನುಮೋದನೆಯ ಮಂಜೂರಾತಿಗಾಗಿ ಭಾರತ ಸರ್ಕಾರಕ್ಕೆ ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸಿನ ಹಿಂಪಡೆಯುವಿಕೆಯು, ಭಾರತ ಸರ್ಕಾರವು ಮಂಜೂರು ಮಾಡಿದ ಹಿಂದಿನ ಅನುಮೋದನೆಯನ್ನು ನಿಷ್ಫಲಗೊಳಿಸುವುದಿಲ್ಲ ಮತ್ತು ಹಿಂದಿನ ಅನುಮೋದನೆಯನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ ಮನವಿಯ ಆಧಾರದ ಮೇಲೆ, ಭಾರತ ಸರ್ಕಾರವು, ಈ ತೀರ್ಪಿನಲ್ಲಿ ಮತ್ತು ಆದೇಶದಲ್ಲಿ ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುವುದು;

(ii) ಆದುದರಿಂದ, 4ನೇ ಜನವರಿ, 2017ರ ಪತ್ರವನ್ನು (ಅನುಬಂಧ–ಎ), ಹಿಂದಿನ ಅನುಮೋದನೆಯನ್ನು ಹಿಂಪಡೆಯುವುದಕ್ಕಾಗಿ ರಾಜ್ಯ ಸರ್ಕಾರವು ಸಲ್ಲಿಸಿದ ಮನವಿಯೆಂದು ಪರಿಗಣಿಸತಕ್ಕದ್ದು ಎಂದು ನಾವು ನಿರ್ದೇಶಿಸುತ್ತೇವೆ. ರಾಜ್ಯ ಸರ್ಕಾರವು ಸಲ್ಲಿಸಿದ ಮನವಿಯೊಂದಿಗೆ ವ್ಯವಹರಿಸುವಾಗ,

ಭಾರತ ಸರ್ಕಾರವು, ದಿನಾಂಕ: 10ನೇ ನವಂಬರ್, 2016ರ ಆದೇಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು;

(iii) ಮೇಲೆ ಹೇಳಿದ ದಿನಾಂಕ: 10ನೇ ನವಂಬರ್, 2016ರ ಆದೇಶದಲ್ಲಿ ಉಲ್ಲೇಖಿಸಿದ ಕಾರಣಗಳು, ಅಷ್ಟೇ ಅಲ್ಲದೆ, ದಿನಾಂಕ: 4ನೇ ಜನವರಿ, 2019ರ ಪತ್ರದಲ್ಲಿ ಉಲ್ಲೇಖಿಸಿದ ಕಾರಣಗಳು ಭಾರತ ಸರ್ಕಾರಕ್ಕೆ ಬಂಧನಕಾರಿಯಲ್ಲದಿರುವುದರಿಂದ, ಅವುಗಳ ಸರಿತನದ ಬಗ್ಗೆ ನಾವು ತೀರ್ಪು ನೀಡಿಲ್ಲವೆಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ;

(iv) ಈ ಹಿಂದೆ ಅಭಿಪ್ರಾಯಪಟ್ಟಿರುವಂತೆ, ಅರ್ಜಿದಾರನಿಗೆ ಕಾರಣ ತೋರಿಸುವ ನೋಟೀಸನ್ನು ಹಾಗೂ ಅದಕ್ಕೆ ಉತ್ತರ ನೀಡಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಅವಕಾಶವನ್ನು ನೀಡಿದ ನಂತರ, ರಾಜ್ಯ ಸರ್ಕಾರದ ಮನವಿ ಕುರಿತು ಭಾರತ ಸರ್ಕಾರವು ನಿರ್ಧರಿಸತಕ್ಕದ್ದು;

(v) ಇಂದಿನಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ, ಭಾರತ ಸರ್ಕಾರವು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು;

(vi) 1957ರ ಸದರಿ ಅಧಿನಿಯಮದ 10ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದಲ್ಲಿ ಉಪಬಂಧಿಸಿದ ಕಾಲಮಿತಿಯ ಅನ್ವಯತೆ ಕುರಿತು ನಾವು ಯಾವುದೇ ತೀರ್ಪನ್ನು ನೀಡಿರುವುದಿಲ್ಲವೆಂಬುದನ್ನು ಹಾಗೂ ಸದರಿ ವಿಷಯವನ್ನು ಮುಕ್ತವಾಗಿರಸಲಾಗಿದೆ ಎಂದು ನಾವು ಸ್ಪಷ್ಟಪಡಿಸುತ್ತೇವೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

*1. ಸಮಾಜ ಪರಿವರ್ತನಾ ಸಮುದಾಯ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 2*

*2. (2012) 11 ಎಸ್‌ಸಿಸಿ 1*
*ಮೊನ್ನೆಟ್ ಇಸ್ಪಾಟ್ ಅಂಡ್ ಎನರ್ಜಿ ಲಿಮಿಟೆಡ್*
*–ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು (ಉಲ್ಲೇ) 7*

ಅರ್ಜಿದಾರರ ಪರ : ಶ್ರೀ ಜಯಕುಮಾರ್ ಎಸ್. ಪಾಟೀಲ್, ಹಿರಿಯ ನ್ಯಾಯವಾದಿ,
ಶ್ರೀ ಜೋಸೆಫ್ ಅಂಥೋನಿ, ನ್ಯಾಯವಾದಿ ಇವರ ಪರವಾಗಿ;
1 ರಿಂದ 4ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿಕ್ರಮ್ ಹುಯಿಲಗೋಳ್,
ಉಚ್ಚ ನ್ಯಾಯಾಲಯದ ಸರ್ಕಾರಿ ಪೀಡರ್;
5ನೇ ಮತ್ತು 6ನೇ ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಎ. ಅರಿಗಾ, ನ್ಯಾಯವಾದಿ.

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:**

ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿನ ಈ ರಿಟ್ ಅರ್ಜಿಯಲ್ಲಿನ ವಿವಾದವು ಅತ್ಯಂತ ಸಂಕ್ಷಿಪ್ತ ಪರಿಧಿಯದ್ದಾಗಿದೆ.

2. ಈ ಅರ್ಜಿಯಲ್ಲಿ ಪರಿಗಣನೆಗಾಗಿ ಉದ್ಭವಿಸಿರುವ ಕಾನೂನು ವಿಷಯವನ್ನು ನಿರ್ಣಯಿಸುವ ದೃಷ್ಟಿಯಿಂದ, ವಾಸ್ತವಿಕ ಸಂಗತಿಯನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುವುದು ಅವಶ್ಯವಾಗಿದೆ.

1997ನೇ ಸಾಲಿನಲ್ಲಿ, ಅರ್ಜಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಿರುವ 14.59 ಎಕರೆಗಳ ವಿಸ್ತೀರ್ಣದ ಪ್ರದೇಶದ ಮೇಲೆ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಅರ್ಜಿದಾರರು ಒಂದು ಅರ್ಜಿಯನ್ನು ಸಲ್ಲಿಸಿದ್ದರು. 4ನೇ ಏಪ್ರಿಲ್, 2008ರಂದು, ರಾಜ್ಯ ಸರ್ಕಾರವು, ಅರ್ಜಿದಾರರಿಗೆ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಯನ್ನು ಶಿಫಾರಸ್ಸು ಮಾಡಿ, ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ (ಸಂಕ್ಷಿಪ್ತವಾಗಿ 1957ರ

ಸದರಿ ಅಧಿನಿಯಮ) 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಪೂರ್ವಾನುಮೋದನೆ ನೀಡಲು ಭಾರತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿತ್ತು. ಸದರಿ ಶಿಫಾರಸ್ಸಿನ ಆಧಾರದ ಮೇಲೆ, 3ನೇ ಜೂನ್, 2008ರಂದು, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಪೂರ್ವಾನುಮೋದನೆಯನ್ನು ಭಾರತ ಸರ್ಕಾರವು ನೀಡಿತು. ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಅರ್ಜಿದಾರನು ಅರ್ಜಿ ಸಲ್ಲಿಸಿರುವ ವಸ್ತುವಿಷಯವಾದ ಜಮೀನಿನ ಸಂಬಂಧದಲ್ಲಿ 'ಅರಣ್ಯ ಇಲಾಖೆ ತೀರುವಳಿ ಪತ್ರ' ನೀಡಲು ಅರ್ಜಿ ಸಲ್ಲಿಸಿದ ತರುವಾಯ, ಅವರು ತೆಗೆದುಕೊಂಡ ಕ್ರಮಗಳನ್ನು ಅರ್ಜಿದಾರರು ನಿರೂಪಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದ್ದ ಕೇಂದ್ರ ಸಬಲೀಕೃತ ಸಮಿತಿಯ ವರದಿಯನ್ನು ಅರ್ಜಿದಾರರು ಉಲ್ಲೇಖಿಸಿದ್ದಾರೆ. ***ಸಮಾಜ ಪರಿವರ್ತನಾ ಸಮುದಾಯ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[1] , ಮೊಕದ್ದಮೆಯಲ್ಲಿನ ತೀರ್ಪಿನ ಮತ್ತು ಆದೇಶದ 12ನೇ ಕಂಡಿಕೆಯ ಮೂಲಕ, ಸರ್ವೋಚ್ಚ ನ್ಯಾಯಾಲಯವು, ಹೊಸ ಗಣಿಗಾರಿಕೆ ಗುತ್ತಿಗೆಗಳ ಮಂಜೂರಾತಿ ಕುರಿತ ನಿರ್ಬಂಧವನ್ನು ತೆಗೆದಿರುವುದರಿಂದ ಇದರೊಂದಿಗೆ ನಾವು ವ್ಯವಹರಿಸುವುದಿಲ್ಲ; ಪರಂತು, ಅರ್ಜಿಗಳನ್ನು ಕುರಿತು ಕಾನೂನಿಗೆ ಮತ್ತು ಸದರಿ ತೀರ್ಪಿನಲ್ಲಿರುವ ನಿರ್ದೇಶನಗಳಿಗೆ ಹಾಗೂ ಅದರ ಆಶಯಕ್ಕೆ ಅನುಸಾರವಾಗಿ ವ್ಯವಹರಿಸಲಾಗುವುದು.

3. ಅರ್ಜಿದಾರನ ಮೊಕದ್ದಮೆಯ ಪ್ರಕಾರ, 25ನೇ ಮಾರ್ಚ್, 2015ರಂದು, ರಾಜ್ಯ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆಯು, ಅರ್ಜಿದಾರನ ಮೊಕದ್ದಮೆಯು 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದಲ್ಲಿ ಬರುತ್ತದೆ ಎಂದು ಅಭಿಪ್ರಾಯಪಟ್ಟಿತು. 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಪೂರ್ವಾನುಮೋದನೆಯನ್ನು ಪಡೆಯಲಾಗಿದೆ ಹಾಗೂ ಈಗ ಸಂಶಯಾತೀತವಾಗಿ ಸಾಬೀತುಪಡಿಸಲಾಗಿರುವ ಪ್ರಸ್ತಾವಗಳು ಮತ್ತು ಪ್ರಕ್ರಿಯೆಗಳು ತಪ್ಪಾಗಿವೆ, ಲೋಪದೋಷದಿಂದ ಕೂಡಿವೆ ಮತ್ತು ಕಾನೂನಿಗೆ ವಿರುದ್ಧವಾಗಿವೆ

1. ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 562/2009ರಲ್ಲಿ, ದಿನಾಂಕ: 18ನೇ ಏಪ್ರಿಲ್, 2013

ಎಂದು ನಿರ್ಣಯಿಸಿ ಕರ್ನಾಟಕ ರಾಜ್ಯವು 10ನೇ ನವಂಬರ್, 2016ರಂದು ಆದೇಶವನ್ನು ಮಾಡಿತು. ಇದಲ್ಲದೆ ಈ ಆದೇಶದಲ್ಲಿ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಅರ್ಜಿದಾರನಿಗೆ ನೀಡಿದ ಪೂರ್ವಾನುಮೋದನೆಯನ್ನು ಹಿಂತೆಗೆದುಕೊಳ್ಳಲು ಭಾರತ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳಬೇಕೆಂದು ಸಹ ಉಲ್ಲೇಖಿಸಲಾಗಿದೆ. ದಿನಾಂಕ: 10ನೇ ನವಂಬರ್, 2016ರ ಸದರಿ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ರಿಟ್ ಅರ್ಜಿಯನ್ನು ಸಲ್ಲಿಸಿದರು. ತರುವಾಯದಲ್ಲಿ, ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ಅನ್ನು ಕರ್ನಾಟಕ ಸರ್ಕಾರದ ಗಣಿ ಮಂತ್ರಾಲಯದ ಅಧೀನ ಕಾರ್ಯದರ್ಶಿಗಳು ಹೊರಡಿಸಿದ್ದಾರೆ. 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿನ ಪೂರ್ವಾನುಮೋದನೆಯನ್ನು ಹಿಂತೆಗೆದುಕೊಳ್ಳುವ ಸಂಬಂಧದಲ್ಲಿ ಕರ್ನಾಟಕ ಸರ್ಕಾರದ ಮನವಿಯನ್ನು ಕುರಿತು ಸದರಿ ಇ–ಮೇಲ್ ವ್ಯವಹರಿಸುತ್ತದೆ. ರಾಜ್ಯ ಸರ್ಕಾರವು ಪ್ರಕ್ರಿಯೆಯಲ್ಲಿ ತಪ್ಪು ಮಾಡಿರುವುದರಿಂದ, ತಾನು ಮಾಡಿದ ಶಿಫಾರಸ್ಸನ್ನು ರಾಜ್ಯ ಸರ್ಕಾರವೇ ಹಿಂತೆಗದುಕೊಳ್ಳಬೇಕಿದೆ ಎಂದು ಸದರಿ ಇ–ಮೇಲ್‌ನಲ್ಲಿ ದಾಖಲಿಸಲಾಗಿದೆ. ಇದಲ್ಲದೆ, ರಾಜ್ಯ ಸರ್ಕಾರವು ಒಮ್ಮೆ ಶಿಫಾರಸ್ಸು ಪತ್ರವನ್ನು ಹಿಂತೆಗೆದುಕೊಂಡ ನಂತರ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ತಿಳಿಸುವ ಅದರ ಪತ್ರವು ತಾನಾಗಿಯೇ ನಿಷ್ಫಲವಾಗುತ್ತದೆ. ತರುವಾಯದಲ್ಲಿ, 4ನೇ ಜನವರಿ, 2017ರ ಪತ್ರದ ಮೂಲಕ, ಅದರಲ್ಲಿ ಹೇಳಿದ ಕಾರಣಗಳಿಗಾಗಿ, ರಾಜ್ಯ ಸರ್ಕಾರವು ನೀಡಿದ ಹಿಂದಿನ ಅನುಮೋದನೆಯ ನೀಡಿಕೆಗೆ ಮಾಡಿದ ಶಿಫಾರಸ್ಸನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಕರ್ನಾಟಕ ಸರ್ಕಾರವು ತಿಳಿಸಿದೆ. ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ನ ಹಿನ್ನೆಲೆಯಲ್ಲಿ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಪೂರ್ವಾನುಮೋದನೆ ನೀಡಿರುವುದು ನಿಷ್ಫಲವಾಗಿದೆ ಎಂದು ಕರ್ನಾಟಕ ಸರ್ಕಾರವು ಸದರಿ ಪತ್ರದಲ್ಲಿ ಅಭಿಪ್ರಾಯಪಟ್ಟಿದೆ.

4. ಪ್ರಸ್ತುತ ಅರ್ಜಿಯಲ್ಲಿ, ದಿನಾಂಕ: 10ನೇ ನವಂಬರ್, 2016ರ ಆದೇಶವನ್ನು, ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ನ್ನು ಹಾಗೂ ದಿನಾಂಕ: 4ನೇ ಜನವರಿ, 2017ರ ಪತ್ರವನ್ನು ಪ್ರಶ್ನಿಸಲಾಗಿದೆ ಎಂಬುದನ್ನು ಇಲ್ಲಿ ನಾವು ಗಮನಿಸಬೇಕು.

5. ಅರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ಮೇಲೆ ಹೇಳಿದ ಆದೇಶ ಹಾಗೂ ಇ–ಮೇಲ್‌ನ ಒಳಾಂಶಗಳು ಮತ್ತು ಸರ್ಕಾರವು ಹೊರಡಿಸಿದ ಪ್ರಶ್ನಿತ ಪತ್ರಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ದಿನಾಂಕ: 10ನೇ ನವಂಬರ್, 2016ರ ಆದೇಶದಲ್ಲಿ ದಾಲಿಸಿದ ನಿರ್ಣಯಗಳು ಹೇಗೆ ತಪ್ಪಾಗಿವೆ ಎಂಬುದನ್ನು ಸಹ ಅವರು ತೋರಿಸಿಕೊಟ್ಟಿದ್ದಾರೆ. ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳುವ ಅವಕಾಶ ನೀಡದೆ ಪೂರ್ವಾನುಮೋದನೆಯನ್ನು ಹಿಂಪಡೆದ ಸಂಗತಿಯನ್ನಷ್ಟೇ ಅಲ್ಲದೆ ಅವರು, ಪೂರ್ವಾನುಮೋದನೆಯು ಕಾನೂನುಸಮ್ಮತ ನಿರೀಕ್ಷೆಯನ್ನು ಸೃಜಿಸುತ್ತದೆ ಎಂಬುದನ್ನು ಸಹ ತೋರಿಸಿಕೊಟ್ಟಿದ್ದಾರೆ. ಶಿಫಾರಸ್ಸನ್ನು ಹಿಂತೆಗೆದುಕೊಂಡ ರಾಜ್ಯ ಸರ್ಕಾರದ ಕ್ರಮದ ಆಧಾರದ ಮೇಲೆ ಮಾತ್ರವೇ ಪೂರ್ವಾನುಮೋದನೆಯನ್ನು ಸ್ವಯಂ ಆಗಿ ಹಿಂತೆಗೆದು ಕೊಳ್ಳಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

6. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದ ಸಿಂಧುತ್ವವನ್ನು ಪ್ರಶ್ನಿಸಿರುವ ಅರ್ಜಿಯಲ್ಲಿನ (ಇ) ಖಂಡಕ್ಕೆ ಅರ್ಜಿದಾರರು ಒತ್ತು ನೀಡಿಲ್ಲವೆಂಬ ಮನವಿಯನ್ನು ನಾವು ಇಲ್ಲಿ ಗಮನಿಸಬೇಕು.

7. ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸಿನ ಹಿಂಪಡೆಯುವಿಕೆಯ ಆಧಾರದ ಮೇಲೆ, ಭಾರತ ಸರ್ಕಾರವು ಪೂರ್ವಾನುಮೋದನೆಯನ್ನು ಹಿಂಪಡೆಯುವ ಅಧಿಕಾರಗಳು ಅದರಲ್ಲಿ ನಿಹಿತವಾಗಿವೆ ಎಂದು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಅವರು ನಿವೇದಿಸಿಕೊಂಡಿದ್ದಾರೆ. ***ಮೊನ್ನೆಟ್ ಇಸ್ಪಾಟ್ ಅಂಡ್ ಎನರ್ಜಿ ಲಿಮಿಟೆಡ್ –ವಿರುದ್ಧ– ಭಾರತ ಒಕ್ಕೂಟ ಮತ್ತು ಇತರರು***[2], ಮೊಕದ್ದಮೆಯಲ್ಲಿನ ನಿರ್ಣಯದ 264ನೇ ಕಂಡಿಕೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಗಳನ್ನು ಅವರು ಅವಲಂಬಿಸಿದ್ದಾರೆ. ಪೂರ್ವಾನುಮೋದನೆಯನ್ನು ಹಿಂಪಡೆಯುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ರಾಜ್ಯ ಸರ್ಕಾರದ ಆದೇಶದಲ್ಲಿ ದಾಖಲಿಸಿದ ನಿರ್ಣಯಗಳ

2. (2012) 11 ಎಸ್‌ಸಿಸಿ 1

ಕಡೆಗೆ ಸಹ ಅವರು ನಮ್ಮ ಗಮನ ಸೆಳೆದಿದ್ದಾರೆ. ದಿನಾಂಕ: 10ನೇ ನವಂಬರ್, 2016ರಂದು ಹೊರಡಿಸಿದ ಆದೇಶದಲ್ಲಿ ದಾಖಲಿಸಿದ ನಿರ್ಣಯಗಳ ಹಿನ್ನೆಲೆಯಲ್ಲಿ, ರಾಜ್ಯದ ಶಿಫಾರಸ್ಸನ್ನು ಹಿಂಪಡೆಯುವ ಅದರ ಅಧಿಕಾರಗಳು ಅದರಲ್ಲಿ ನಿಹಿತವಾಗಿವೆ ಎಂದು ಅವರು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದ ಕಡೆಗೆ ಸಹ ನಮ್ಮ ಗಮನವನ್ನು ಸೆಳೆದಿದ್ದು, ಅದು ನಿರ್ದಿಷ್ಟ ಸಮಯವು ಕೊನೆಗೊಂಡ ನಂತರ ಗುತ್ತಿಗೆಯ ಜಾರಿ ಮೇಲೆ ನಿರ್ಬಂಧವನ್ನು ವಿಧಿಸುತ್ತದೆ.

8. ಭಾರತ ಒಕ್ಕೂಟವನ್ನು ಪ್ರತಿನಿಧಿಸಿರುವ ಮಾನ್ಯ ನ್ಯಾಯವಾದಿಗಳು ಸಹ ಭಾರತ ಒಕ್ಕೂಟದ ಕ್ರಮವನ್ನು ಸಮರ್ಥಿಸಿದ್ದಾರೆ. 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದ ಶಿಫಾರಸ್ಸಿನ ಆಧಾರದ ಮೇಲೆ ಪೂರ್ವಾನುಮೋದನೆಯನ್ನು ನೀಡಲಾಗಿದೆ ಮತ್ತು ಅದರಿಂದ, ಒಮ್ಮೆ ಶಿಫಾರಸ್ಸನ್ನು ಹಿಂಪಡೆದರೆ ಪೂರ್ವಾನುಮೋದನೆಯು ಅಸ್ತಿತ್ವಲ್ಲಿರುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಅವರು, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ ಅರ್ಜಿದಾರರಲ್ಲಿ ಯಾವುದೇ ನಿಹಿತ ಹಕ್ಕು ಇರುವುದಿಲ್ಲ ಮತ್ತು ಮಂಜೂರಾತಿಯು ಸಹಜವಾಗಿಯೇ 1957ರ ಸದರಿ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟಿದೆ ಹಾಗೂ ಅದರಿಂದಾಗಿ, ಯಾವುದೇ ಹಸ್ತಕ್ಷೇಪದ ಅವಶ್ಯಕತೆ ಇರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

9. ಈ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಗಣಿಸಿದ್ದೇವೆ.

10. 1957ರ ಸದರಿ ಅಧಿನಿಯುಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

***"ನಿರೀಕ್ಷಿತ ಲೈಸೆನ್ಸ್‌ಗಳ ಅಥವಾ ಗಣಿಗಾರಿಕೆ ಗುತ್ತಿಗೆಗಳ ಮಂಜೂರಾತಿ ಕುರಿತ ನಿರ್ಬಂಧಗಳು.***

*(1) ರಾಜ್ಯ ಸರ್ಕಾರವು, ಯಾರೇ ವ್ಯಕ್ತಿಗೆ ಸ್ಥಳಾನ್ವೇಷಣೆಯ ಪರವಾನಗಿ, ನಿರೀಕ್ಷಿತ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು, ಅಂಥ ವ್ಯಕ್ತಿಯು,–*

*(ಎ) ಭಾರತೀಯ ರಾಷ್ಟ್ರೀಯನಾಗಿದ್ದ ಅಥವಾ ಕಂಪನಿಗಳ ಅಧಿನಿಯಮ, 2013ರ (2013ರ 18) 2ನೇ ಪ್ರಕರಣದ (20)ನೇ ಖಂಡದಲ್ಲಿ ಪರಿಭಾಷಿಸಿದಂತೆ ಕಂಪನಿಯಾಗಿದ್ದ ಹೊರತು ಮಂಜೂರು ಮಾಡತಕ್ಕದ್ದಲ್ಲ; ಮತ್ತು*

*ಪರಂತು, ಮೊದಲ ಅನುಸೂಚಿಯ ಭಾಗ–ಎ ಮತ್ತು ಭಾಗ–ಬಿ ಇವುಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಗಣಿಗಾರಿಕೆಯ ಸಂಬಂಧದಲ್ಲಿನ ಯಾವುದೇ ಸ್ಥಳಾನ್ವೇಷಣೆಯ ಪರವಾನಗಿ, ನಿರೀಕ್ಷಿತ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಹೊರತು ಮಂಜೂರು ಮಾಡತಕ್ಕದ್ದಲ್ಲ.*

***ವಿವರಣೆ.–*** *ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಯನ್ನು,–*

*(ಎ) ವ್ಯಕ್ತಿಗಳ ಫರ್ಮ್ ಅಥವಾ ಇತರ ಸಂಘದ ಸಂದರ್ಭದಲ್ಲಿ, ಫರ್ಮ್‌ನ ಎಲ್ಲಾ ಸದಸ್ಯರು ಅಥವಾ ಸಂಘದ ಎಲ್ಲಾ ಸದಸ್ಯರು ಭಾರತದ ನಾಗರಿಕರಾಗಿದ್ದರೆ ಮಾತ್ರ; ಮತ್ತು*

*(ಬಿ) ವ್ಯಕ್ತಿಯು ಸಂದರ್ಭದಲ್ಲಿ, ಆತನು ಭಾರತದ ನಾಗರಿಕನಾಗಿದ್ದರೆ*

*– ಆತನನ್ನು/ಅವರನ್ನು ಭಾರತ ರಾಷ್ಟ್ರೀಯನೆಂದು/ರೆಂದು ಭಾವಿಸತಕ್ಕದ್ದು.*

*(ಒತ್ತು ನೀಡಲಾಗಿದೆ)*

11. 1957ರ ಸದರಿ ಅಧಿನಿಯುಮದ 5ನೇ ಪ್ರಕರಣದ (2)ನೇ ಉಪ–ಪ್ರಕರಣವು, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ರಾಜ್ಯ ಸರ್ಕಾರಕ್ಕೆ ಪೂರ್ವನಿದರ್ಶನದ ಷರತ್ತನ್ನು ವಿಧಿಸುತ್ತದೆ. ಮೊಕದ್ದಮೆಯ ಸಂಗತಿಗಳಲ್ಲಿ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಭಾರತ ಸರ್ಕಾರದ ಪೂರ್ವಾನುಮೋದನೆಯು, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿನ ಅರ್ಜಿಯನ್ನು ಪರಿಗಣಿಸಲು ರಾಜ್ಯವನ್ನು ಶಕ್ತಗೊಳಿಸಲು ಅಗತ್ಯವೆಂಬುದರಲ್ಲಿ ಯಾವುದೇ ವಿವಾದವಿಲ್ಲ.

12. 1957ರ ಸದರಿ ಅಧಿನಿಯುಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಪರಂತುಕದ ಅಡಿಯಲ್ಲಿ ಪೂರ್ವಾನುಮೋದನೆಯನ್ನು ಮಂಜೂರು ಮಾಡಲು, ಭಾರತ ಸರ್ಕಾರಕ್ಕೆ ರಾಜ್ಯ ಸರ್ಕಾರವು ಶಿಫಾರಸ್ಸನ್ನು ಮಾಡಬೇಕೆಂಬುದು ಸತ್ಯ. ಮೇಲೆ ವ್ಯಕ್ತಪಡಿಸಿದಂತೆ ಪರಂತುಕವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಹೊರತು ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡತಕ್ಕದ್ದಲ್ಲವೆಂದು ಹೇಳುತ್ತದೆ. 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಪರಂತುಕದ ಅಡಿಯಲ್ಲಿ ಭಾರತ ಸರ್ಕಾರದ ಪೂರ್ವಾನುಮೋದನೆಯು, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲು ರಾಜ್ಯಕ್ಕೆ ಪೂರ್ವನಿದರ್ಶಿತ ಷರತ್ತಾಗಿದೆ ಎಂಬ ಸಂಗತಿಯಿಂದಲೇ, ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸು, ಪೂರ್ವಾನುಮೋದನೆ ನೀಡಲು ಭಾರತ ಸರ್ಕಾರಕ್ಕೆ ಎಂದಿಗೂ ಬಂಧನಕಾರಿಯಾಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪೂರ್ವಾನುಮೋದನೆಯನ್ನು

ನೀಡುವ ಮೊದಲು ಭಾರತ ಸರ್ಕಾರವು ಈ ಕುರಿತು ಗಮನ ನೀಡಬೇಕಾದ ಅಗತ್ಯವಿದೆ. ಸಹಜವಾಗಿಯೇ, ಭಾರತ ಸರ್ಕಾರವು, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ ಸಲ್ಲಿಸಿದ ಅರ್ಜಿಯಲ್ಲಿ ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸುಗಳ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ. ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಯ ದಾರಿಯಲ್ಲಿ ಕಾನೂನು ಅಡಚಣೆಗಳಿದ್ದರೆ, ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸುಗಳ ಆಧಾರದ ಮೇಲೆ ಪೂರ್ವಾನುಮೋದನೆ ನೀಡುವುದಕ್ಕೆ ನಿರಾಕರಿಸಲು ಭಾರತ ಸರ್ಕಾರಕ್ಕೆ ಅಧಿಕಾರವಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸು ಭಾರತ ಸರ್ಕಾರಕ್ಕೆ ಬಂಧನಕಾರಿಯಾಗುವುದಿಲ್ಲ ಮತ್ತು ಶಿಫಾರಸ್ಸಿನಲ್ಲಿ ಏನೇ ಇದ್ದರೂ, ಪೂರ್ವಾನುಮೋದನೆ ನೀಡುವುದಕ್ಕೆ ನಿರಾಕರಿಸಲು ಭಾರತ ಸರ್ಕಾರವು ಸದಾ ಮುಕ್ತವಾಗಿದೆ.

13. ಈಗ ಮೊಕದ್ದಮೆಯ ಸಂಗತಿಗಳಿಗೆ ಬರುವುದಾದರೆ, ದಿನಾಂಕ: 10ನೇ ನವಂಬರ್, 2016ರ ಆದೇಶದಲ್ಲಿ, 1957ರ ಸದರಿ ಅಧಿನಿಯಮದ 19ನೇ ಪ್ರಕರಣವು ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುತ್ತದೆ ಎಂದು ನಿರ್ಣಯಗಳನ್ನು ದಾಖಲಿಸಲಾಗಿದೆ. 19ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

> *"ಅಧಿನಿಯಮದ ಉಲ್ಲಂಘನೆಯಾದರೆ, ನಿರೀಕ್ಷಿತ ಲೈಸೆನ್ಸ್‌ಗಳು ಮತ್ತು ಗಣಿಗಾರಿಕೆ ಗುತ್ತಿಗೆಗಳು ಅಸಿಂಧುಗೊಳ್ಳುತ್ತವೆ.*
>
> *ಮಂಜೂರು ಮಾಡಲಾದ ಯಾವುದೇ ಸ್ಥಳಾನ್ವೇಷಣೆ ಪರವಾನಗಿ, ನಿರೀಕ್ಷಿತ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು, ಈ ಅಧಿನಿಯಮದ ಅಥವಾ ಅದರಡಿ ರಚಿಸಿದ ಯಾವುವೇ ನಿಯಮಗಳ ಅಥವಾ ಆದೇಶಗಳನ್ನು ಉಲ್ಲಂಘಿಸಿ ನವೀಕರಿಸಿದರೆ ಅಥವಾ ಆರ್ಜಿಸಿದರೆ, ಅದು ಅಸಿಂಧುಗೊಳ್ಳತಕ್ಕದ್ದು ಮತ್ತು ಅದಕ್ಕೆ ಯಾವುದೇ ಪರಿಣಾಮವಿರತಕ್ಕದ್ದಲ್ಲ."*

14. ನಿರೀಕ್ಷಿತ ಲೈಸೆನ್ಸನ್ನು ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ನವೀಕರಿಸಿದ ಅಥವಾ ಆರ್ಜಿಸಿದ ನಂತರ ಮಾತ್ರವೇ 19ನೇ ಪ್ರಕರಣವು ಮುನ್ನೆಲೆಗೆ ಬರುತ್ತದೆ. 1957ರ ಸದರಿ ಅಧಿನಿಯಮದ ಅಥವಾ ಅದರಡಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಅದನ್ನು ಮಂಜೂರು ಮಾಡಿದರೆ, ನವೀಕರಿಸಿದರೆ ಅಥವಾ ಆರ್ಜಿಸಿದರೆ, ಅದು ಅಸಿಂಧುಗೊಳ್ಳುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ದಿನಾಂಕ: 10ನೇ ನವಂಬರ್, 2016ರ ಆದೇಶವನ್ನು ಹೊರಡಿಸಿದಾಗ, ಅರ್ಜಿದಾರನು ಸಲ್ಲಿಸಿದ ಅರ್ಜಿಯು, ರಾಜ್ಯ ಸರ್ಕಾರದ ಪರಿಗಣನೆಯ ಹಂತದಲ್ಲಿತ್ತು. ಇದಲ್ಲದೆ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಿದ ಅನುಮೋದನೆಯು, ತಪ್ಪಾಗಿರುವ, ದೋಷಪೂರ್ಣವಾಗಿರುವ ಮತ್ತು ಕಾನೂನಿಗೆ ವಿರುದ್ಧವಾಗಿರುವ ಪ್ರಸ್ತಾವಗಳ ಅಥವಾ ಪ್ರಕ್ರಿಯೆಗಳ ಆಧಾರದ ಮೇಲಿನ ಕಾರಣಕ್ಕಾಗಿ ಹಿಂಪಡೆಯಲಾಗುವುದು ಎಂಬುದು ಸದರಿ ಆದೇಶದಲ್ಲಿ ದಾಖಲಿಸಿದ ನಿರ್ಣಯವಾಗಿದೆ. ಹಾಗಾಗಿ, ಅರ್ಜಿದಾರನ ಅರ್ಜಿ ಕುರಿತು ಶಿಫಾರಸ್ಸನ್ನು ಸಲ್ಲಿಸುವ ಪ್ರಕ್ರಿಯೆಯು ತಪ್ಪಾದುದಾಗಿದೆ ಅಥವಾ ದೋಷಪೂರ್ಣವಾಗಿದೆ ಎಂಬುದು ನಿರ್ಣಯವಾಗಿರುವುದಿಲ್ಲ, ಭಾರತ ಸರ್ಕಾರವು ನೀಡಿದ ಅನುಮೋದನೆಯು, ತಪ್ಪಾಗಿರುವಂಥ ಅಥವಾ ದೋಷಪೂರ್ಣವಾಗಿರುವಂಥ ಮತ್ತು ಕಾನೂನಿನ ವಿರುದ್ಧವಾಗಿರುವಂಥ ಪ್ರಸ್ತಾವಗಳನ್ನು ಮತ್ತು ಪ್ರಕ್ರಿಯೆಗಳನ್ನು ಆಧರಿಸಿದೆ ಎಂಬುದು ನಿರ್ಣಯವಾಗಿದೆ.

15. ಈ ನಿರ್ಣಯವನ್ನು ಭಾರತ ಸರ್ಕಾರವು ದಾಖಲಿಸದೆ ರಾಜ್ಯ ಸರ್ಕಾರವು ದಾಖಲಿಸಿದೆ ಎಂಬುದನ್ನು ನಾವು ಗಮನಿಸಬೇಕಿದೆ. ಸಂಶಯಕ್ಕೆಡೆ ಇಲ್ಲದಂತೆ, ಜಮೀನು ಅರಣ್ಯ ಭೂಮಿಯಾಗಿದೆ ಮತ್ತು ಇತರ ಅರ್ಜಿಗಳು ಇತ್ಯರ್ಥದಲ್ಲಿದ್ದರೂ, ರಾಜ್ಯ ಸರ್ಕಾರವು ಅರ್ಜಿದಾರನ ಅರ್ಜಿಯನ್ನು ಒಂದೇ ಅರ್ಜಿಯಾಗಿ ಪರಿಗಣಿಸಿದೆ ಎಂಬಂಥ ಸದರಿ ಆದೇಶದಲ್ಲಿ ದಾಖಲಿಸಿದ ಕಾರಣಗಳಿವೆ. ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ಕಳುಹಿಸಿದ ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ನ ಸುಸಂಗತ ಭಾಗವು ಈ ಕೆಳಗಿನಂತಿದೆ:

*"ಅರ್ಜಿಯ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರವು ತಪ್ಪೆಸಗಿರುವುದರಿಂದ ಮತ್ತು ಅವರು ಮಾಡಿದ ಶಿಫಾರಸ್ಸಿನ ಮೇಲೆ ಪರಿಣಾಮ ಬೀರುವ ಮೂಲ ಮಾಹಿತಿಯಲ್ಲಿ ಬದಲಾವಣೆ ಇರುವುದರಿಂದ, ಕೇಂದ್ರ ಸರ್ಕಾರದ ಹಿಂಪಡೆ ಕುರಿತ ತಮ್ಮ ಮನವಿಗೆ ಸಂಬಂಧಪಟ್ಟಂತೆ, ಎಮ್‌ಎಮ್‌ಡಿಆರ್ ಅಧಿನಿಯಮ, 1957ರ 5(1)ನೇ ಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆಗಾಗಿ ಸಲ್ಲಿಸಿದ ಪ್ರಸ್ತಾವವನ್ನು (ಸಿಎಲ್; ಎಮ್‌ಎಮ್‌ಎಮ್:2005, ದಿನಾಂಕ: 4.4.2008) ಕುರಿತು ಮಾಡಿರುವ ಶಿಫಾರಸ್ಸು ಪತ್ರವನ್ನು ಹಿಂತೆಗೆದುಕೊಳ್ಳುವುದು ರಾಜ್ಯ ಸರ್ಕಾರದ ಪ್ರಾಥಮಿಕ ಹೊಣೆಗಾರಿಕೆಯಾಗಿದೆ ಎಂದು ತಿಳಿಸಲಾಗಿದೆ. ರಾಜ್ಯ ಸರ್ಕಾರವು ಒಮ್ಮೆ ಶಿಫಾರಸ್ಸು ಪತ್ರವನ್ನು ಹಿಂತೆಗೆದುಕೊಂಡಲ್ಲಿ, ಪೂರ್ವಾನುಮೋದನೆ ತಿಳಿಸುವ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5/45/2008 – ಎಮ್‌ಎಲ್‌ವಿ, ದಿನಾಂಕ: 03.06.2008 ತಾನಾಗಿಯೇ ನಿಷ್ಫಲವಾಗುತ್ತದೆ."*

16. ಹೇಳಿರುವುದೆಲ್ಲಾ ಸಂಪೂರ್ಣವಾಗಿ ಹೆಚ್ಚು ಸರಳವಾಗಿದೆ. ಒಮ್ಮೆ ರಾಜ್ಯ ಸರ್ಕಾರದ ಶಿಫಾರಸ್ಸಿನ ಹಿಂಪಡೆಗೆ ಅದು ಶಿಫಾರಸ್ಸು ಪತ್ರವನ್ನು ಹಿಂಪಡೆದಲ್ಲಿ, ಪೂರ್ವಾನುಮೋದನೆಯು ನಿಷ್ಫಲವಾಗುತ್ತದೆ ಎಂದು ಅದು ದಾಖಲಿಸಿದೆ. ಇ–ಮೇಲ್‌ನಲ್ಲಿ ಏನು ಹೇಳಲಾಗಿದೆಯೋ ಅದರಿಂದ ಸೂಚನೆ ತೆಗೆದುಕೊಂಡು, ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸನ್ನು ಹಿಂಪಡೆಯಲಾಗುತ್ತದೆ ಎಂದು ಅರ್ಜಿದಾರರಿಗೆ ತಿಳಿಸಿ, ಅವರಿಗೆ ರಾಜ್ಯ ಸರ್ಕಾರವು ದಿನಾಂಕ: 4ನೇ ಜನವರಿ, 2017ರ ಪತ್ರವನ್ನು ನೀಡಿತು. ಆದುದರಿಂದ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಿದ ಪೂರ್ವಾನುಮೋದನೆಯು ತಾನಾಗಿಯೇ ನಿಷ್ಫಲವಾಗುತ್ತದೆ ಎಂದು ರಾಜ್ಯ ಸರ್ಕಾರವು ಅರ್ಜಿದಾರರಿಗೆ ತಿಳಿಸಿತು. ರಾಜ್ಯ ಸರ್ಕಾರದಿಂದ ಶಿಫಾರಸ್ಸಿನ ಉದ್ದೇಶಿತ ಹಿಂಪಡೆಯ ನಂತರ ಅರ್ಜಿದಾರರಿಗೆ ಕೇಂದ್ರ ಸರ್ಕಾರವು ಆ ಪರಿಣಾಮಕ್ಕೆ ಯಾವುದೇ ಪತ್ರವನ್ನು ನೀಡಿರುವುದಿಲ್ಲ.

17. ಈ ಹಿಂದೆ ನಾವು ನಿರ್ಣಯಿಸಿರುವಂತೆ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಿದ ಪೂರ್ವಾನುಮೋದನೆಯ ಮಂಜೂರಾತಿಯು, ಭಾರತ ಸರ್ಕಾರಕ್ಕೆ ಕೇವಲ ಔಪಚಾರಿಕತೆಯಾಗಿರುವುದಿಲ್ಲ. ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸು ಅದಕ್ಕೆ ಬಂಧನಕಾರಿಯಲ್ಲ. ಭಾರತ ಸರ್ಕಾರವು ಅದರ ಗಮನವನ್ನು ಹರಿಸಿಲ್ಲ ಮತ್ತು ಪೂರ್ವಾನುಮೋದನೆಯ ನೀಡಿಕೆಗಾಗಿನ ಮನವಿಯನ್ನು ತಿರಸ್ಕರಿಸುವುದು ಅದರ ಅಧಿಕಾರವಾಗಿದೆ. ರಾಜ್ಯ ಸರ್ಕಾರವು ಮಾಡಿದ ಮನವಿಯ ಪರಿಗಣನೆ ಕುರಿತು ಪೂರ್ವಾನುಮೋದನೆ ನೀಡಿದ ನಂತರ, ಪೂರ್ವಾನುಮೋದನೆಯನ್ನು ಗಮನ ಹರಿಸದೆ ಯಾಂತ್ರಿಕವಾಗಿ ಹಿಂತೆಗೆದುಕೊಳ್ಳಲಾಗುವುದಿಲ್ಲ. 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದಿಂದ ಕಂಡುಬರಬಹುದಾದಂತೆ, ಪೂರ್ವಾನುಮೋದನೆಯ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ರಾಜ್ಯ ಸರ್ಕಾರವನ್ನು ಪ್ರಕರಣವು ಅದಾಗಿಯೇ ಅಗತ್ಯಪಡಿಸುವುದಿಲ್ಲ. ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ನಿಂದ ಭಾರತ ಸರ್ಕಾರವು, ಒಮ್ಮೆ ಶಿಫಾರಸ್ಸನ್ನು ಹಿಂಪಡೆದರೆ, ಅದು ಮಂಜೂರು ಮಾಡಿದ ಪೂರ್ವಾನುಮೋದನೆಯು ನಿಷ್ಫಲವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಂತೆ ಕಾಣುತ್ತದೆ. ಈ ಅಭಿಪ್ರಾಯವು 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾದುದಾಗಿದೆ. 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಒಮ್ಮೆ ಪೂರ್ವಾನುಮೋದನೆಯನ್ನು ಮಂಜೂರು ಮಾಡಿದಲ್ಲಿ, ಶಿಫಾರಸ್ಸನ್ನು ಹಿಂಪಡೆದುದನ್ನು ದಾಖಲಿಸಿ ರಾಜ್ಯ ಸರ್ಕಾರದ ಪತ್ರದ ಆಧಾರದ ಮೇಲೆ ಮಾತ್ರವೇ ಅದನ್ನು ಯಾಂತ್ರಿಕವಾಗಿ ಹಿಂತೆಗೆದುಕೊಳ್ಳಲಾಗುವುದಿಲ್ಲ. ಭಾರತ ಸರ್ಕಾರವು ವಾದಿಸಿದಂತೆ, ಪೂರ್ವಾನುಮೋದನೆಯು ಸ್ವಯಂ ಆಗಿ ನಿಷ್ಫಲವಾಗುವುದಿಲ್ಲ. ಪೂರ್ವಾನುಮೋದನೆಯನ್ನು ಹಿಂಪಡೆಯುವ ಮೊದಲು, ಗುಣಾರ್ಹತೆಗಳ ಆಧಾರದ ಮೇಲೆ ಪರೀಕ್ಷಿಸುವ ಅಗತ್ಯವಿದೆ. ಪೂರ್ವಾನುಮೋದನೆಯ ಹಿಂಪಡೆಯುವಿಕೆಗೆ ರಾಜ್ಯ ಸರ್ಕಾರವು ನೀಡಿದ ಕಾರಣಗಳ ಪರಿಶೀಲನೆಯ ಅಗತ್ಯವಿದೆ. ಈ ಕುರಿತು ಗಮನ ಹರಿಸಿದ ನಂತರ, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ, ಅದರ ಶಿಫಾರಸ್ಸನ್ನು ಹಿಂಪಡೆಯುವ

ಅಧಿಕಾರ ಭಾರತ ಸರ್ಕಾರಕ್ಕಿದೆ. ಮೊಕದ್ದಮೆಯ ಸಂಗತಿಗಳಲ್ಲಿ, ರಾಜ್ಯ ಸರ್ಕಾರದ ಶಿಫಾರಸ್ಸನ್ನು ಹಿಂಪಡೆದಾಗ, ಪೂರ್ವಾನುಮೋದನೆಯು ಸ್ವಯಂ ಆಗಿ ನಿಷ್ಫಲವಾಗುತ್ತದೆ ಎಂಬ ಕಾನೂನಿಂದ ಸಮರ್ಥಿತವಲ್ಲದ ಅಭಿಪ್ರಾಯವನ್ನು ಭಾರತ ಸರ್ಕಾರವು ತಳೆದಿದೆ. ಇದಕ್ಕೆ ಕಾರಣ, ರಾಜ್ಯ ಸರ್ಕಾರದ ಶಿಫಾರಸ್ಸು, ಭಾರತ ಸರ್ಕಾರದ ಮೇಲೆ ಬಂಧನಕಾರಿಯಲ್ಲವೆಂಬುದಾಗಿದೆ. ದಿನಾಂಕ: 10ನೇ ನವಂಬರ್, 2016ರ ಆದೇಶವು ಸಹಿತ ಭಾರತ ಸರ್ಕಾರದ ಮೇಲೆ ಬಂಧನಕಾರಿಯಾಗಿರುವುದಿಲ್ಲ. ಶಿಫಾರಸ್ಸಿನ ಹಿಂಪಡೆಯನ್ನು ಕೋರಿ ರಾಜ್ಯ ಸರ್ಕಾರವು ಮಾಡಿಕೊಂಡ ಮನವಿಯ ಆಧಾರದ ಮೇಲೆ, ಭಾರತ ಸರ್ಕಾರ ಗಮನ ಹರಿಸಬೇಕಾಗುತ್ತದೆ ಮತ್ತು ನಂತರ, ಹಿಂದಿನ ಅನುಮೋದನೆಯ ಹಿಂಪಡೆಯುವಿಕೆ ಪ್ರಶ್ನೆ ಕುರಿತು ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

18. ಆದುದರಿಂದ, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ಭಾರತ ಸರ್ಕಾರವು ದಿನಾಂಕ: 3ನೇ ಜನವರಿ, 2017ರ ಇ–ಮೇಲ್‌ನಲ್ಲಿ ಎತ್ತಿದ ವಾದವು ತಪ್ಪಾದುದಾಗಿದೆ ಹಾಗೂ ಕಾನೂನಿನಿಂದ ಸಮರ್ಥಿತವಾಗುವುದಿಲ್ಲ. ದಿನಾಂಕ: 4ನೇ ಜನವರಿ, 2017ರ ಪತ್ರಕ್ಕೆ ಸಂಬಂಧಪಟ್ಟಷ್ಟರಮಟ್ಟಿಗೆ, ಸಹಜವಾಗಿಯೇ ಸದರಿ ಪತ್ರವು ಸ್ವತಃ ಕೇಂದ್ರ ಸರ್ಕಾರದ ಹಿಂದಿನ ಅನುಮೋದನೆಯ ಹಿಂಪಡೆಯಾಗುವುದಿಲ್ಲ. ಸದರಿ ಪತ್ರವನ್ನು, ಭಾರತ ಸರ್ಕಾರದ ಹಿಂದಿನ ಅನುಮೋದನೆಯನ್ನು ಹಿಂಪಡೆಯಲು ಅದಕ್ಕೆ ಮಾಡಿಕೊಂಡ ಮನವಿಯನ್ನಾಗಿ ಪರಿಗಣಿಸಬೇಕಾಗುತ್ತದೆ. ನಾವು ಅಭಿಪ್ರಾಯಪಟ್ಟಿರುವುದರ ಹಿನ್ನೆಲೆಯಲ್ಲಿ, ಭಾರತ ಸರ್ಕಾರವು, ಹಿಂದಿನ ಅನುಮೋದನೆಯನ್ನು ಹಿಂಪಡೆಯುವ ಕುರಿತು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನ ಅನುಮೋದನೆಯ ಹಿಂಪಡೆಯುವಿಕೆಯು ಅರ್ಜಿದಾರರ ಹಕ್ಕುಗಳನ್ನು ಬಾಧಿಸುವುದರಿಂದ, ಭಾರತ ಸರ್ಕಾರವು ಕಾರಣ ತೋರಿಸುವ ನೋಟೀಸನ್ನು ನೀಡಿ, ಅದಕ್ಕೆ ಉತ್ತರವನ್ನು ಸಲ್ಲಿಸಲು ಅನುಮತಿ ನೀಡಿದರೆ ಮತ್ತು ಅರ್ಜಿದಾರರು ತೆಗೆದುಕೊಂಡ ನಿಲುವನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಆದೇಶವನ್ನು ಹೊರಡಿಸಿದರೆ ಅದು ಸೂಕ್ತವಾಗುವುದು.

19. ತದನುಸಾರವಾಗಿ, ಈ ಮುಂದಿನ ಆದೇಶವನ್ನು ಹೊರಡಿಸುವ ಮೂಲಕ ನಾವು ಅರ್ಜಿಯನ್ನು ವಿಲೆ ಮಾಡುತ್ತೇವೆ:

(i) 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಪರಂತುಕದ ಅಡಿಯಲ್ಲಿ ಹಿಂದಿನ ಅನುಮೋದನೆಯ ಮಂಜೂರಾತಿಗಾಗಿ ಭಾರತ ಸರ್ಕಾರಕ್ಕೆ ರಾಜ್ಯ ಸರ್ಕಾರವು ಮಾಡಿದ ಶಿಫಾರಸ್ಸಿನ ಹಿಂಪಡೆಯುವಿಕೆಯು, ಭಾರತ ಸರ್ಕಾರವು ಮಂಜೂರು ಮಾಡಿದ ಹಿಂದಿನ ಅನುಮೋದನೆಯನ್ನು ನಿಷ್ಫಲಗೊಳಿಸುವುದಿಲ್ಲ ಮತ್ತು ಹಿಂದಿನ ಅನುಮೋದನೆಯನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ ಮನವಿಯ ಆಧಾರದ ಮೇಲೆ, ಭಾರತ ಸರ್ಕಾರವು, ಈ ತೀರ್ಪಿನಲ್ಲಿ ಮತ್ತು ಆದೇಶದಲ್ಲಿ ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುವುದು;

(ii) ಆದುದರಿಂದ, 4ನೇ ಜನವರಿ, 2017ರ ಪತ್ರವನ್ನು (ಅನುಬಂಧ–ಎ), ಹಿಂದಿನ ಅನುಮೋದನೆಯನ್ನು ಹಿಂಪಡೆಯುವುದಕ್ಕಾಗಿ ರಾಜ್ಯ ಸರ್ಕಾರವು ಸಲ್ಲಿಸಿದ ಮನವಿಯೆಂದು ಪರಿಗಣಿಸತಕ್ಕದ್ದು ಎಂದು ನಾವು ನಿರ್ದೇಶಿಸುತ್ತೇವೆ. ರಾಜ್ಯ ಸರ್ಕಾರವು ಸಲ್ಲಿಸಿದ ಮನವಿಯೊಂದಿಗೆ ವ್ಯವಹರಿಸುವಾಗ, ಭಾರತ ಸರ್ಕಾರವು, ದಿನಾಂಕ: 10ನೇ ನವಂಬರ್, 2016ರ ಆದೇಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು;

(iii) ಮೇಲೆ ಹೇಳಿದ ದಿನಾಂಕ: 10ನೇ ನವಂಬರ್, 2016ರ ಆದೇಶದಲ್ಲಿ ಉಲ್ಲೇಖಿಸಿದ ಕಾರಣಗಳು, ಅಷ್ಟೇ ಅಲ್ಲದೆ, ದಿನಾಂಕ: 4ನೇ ಜನವರಿ, 2019ರ ಪತ್ರದಲ್ಲಿ ಉಲ್ಲೇಖಿಸಿದ ಕಾರಣಗಳು ಭಾರತ ಸರ್ಕಾರಕ್ಕೆ ಬಂಧನಕಾರಿಯಲ್ಲದಿರುವುದರಿಂದ, ಅವುಗಳ ಸರಿತನದ

ಬಗ್ಗೆ ನಾವು ತೀರ್ಪು ನೀಡಿಲ್ಲವೆಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ;

(iv) ಈ ಹಿಂದೆ ಅಭಿಪ್ರಾಯಪಟ್ಟಿರುವಂತೆ, ಅರ್ಜಿದಾರನಿಗೆ ಕಾರಣ ತೋರಿಸುವ ನೋಟೀಸನ್ನು ಹಾಗೂ ಅದಕ್ಕೆ ಉತ್ತರ ನೀಡಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಅವಕಾಶವನ್ನು ನೀಡಿದ ನಂತರ, ರಾಜ್ಯ ಸರ್ಕಾರದ ಮನವಿ ಕುರಿತು ಭಾರತ ಸರ್ಕಾರವು ನಿರ್ಧರಿಸತಕ್ಕದ್ದು;

(v) ಇಂದಿನಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ, ಭಾರತ ಸರ್ಕಾರವು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು;

(vii) 1957ರ ಸದರಿ ಅಧಿನಿಯುಮದ 10ನೇ ಪ್ರಕರಣದ (2)ನೇ ಉಪ–ಪ್ರಕರಣದ (ಇ) ಖಂಡದಲ್ಲಿ ಉಪಬಂಧಿಸಿದ ಕಾಲಮಿತಿಯ ಅನ್ವಯತೆ ಕುರಿತು ನಾವು ಯಾವುದೇ ತೀರ್ಪನ್ನು ನೀಡಿರುವುದಿಲ್ಲವೆಂಬುದನ್ನು ಹಾಗೂ ಸದರಿ ವಿಷಯವನ್ನು ಮುಕ್ತವಾಗಿರಿಸಲಾಗಿದೆ ಎಂದು ನಾವು ಸ್ಪಷ್ಟಪಡಿಸುತ್ತೇವೆ;

(viii) ಮೇಲಿನ ನಿಬಂಧನೆಗಳ ಮೇರೆಗೆ ಅರ್ಜಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

---